

بسم اللهِ الرّحمٰن الرّحيم

# ಜಪಾನ್‌ನಲ್ಲಿ ಪ್ರಥಮ ಅಹ್ಮದಿಯಾ ಮಸ್‌ಜಿದ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಜಪಾನಿನ **'ಬೈತುಲ್ ಅಹದ್'** ಮಸೀದಿಯಲ್ಲಿ 20–11–2015 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

الَّذِينَ إِنْ مَكَّنَّاهُمْ فِي الأَرْضِ أَقَامُوا الصَّلاَةَ وَآتَوْا الزَّكَاةَ وَأَمَرُوا بِالْمَعْرُوفِ وَنَهَوْا عَنْ الْمُنْكَرِ وَلِلَّهِ عَاقِبَةُ الأُمُورِ

**ಅಲ್ಲಝೀನ ಇನ್ ಮಕ್ಕನ್ನಾಹುಮ್ ಫಿಲ್‌ಅರ್‌ಝಿ ಅಖಾಮುಸ್ಸಲಾತ ವ ಆತ ಉಝ್ಝುಕಾತ ವ ಅಮರೂ ಬಿಲ್‌ಮಅ್‌ರೂಫಿ ವ ನಹವ್ ಅನಿಲ್ ಮುಂಕರಿ ವಲಿಲ್ಲಾಹಿ ಆಖಿಬತುಲ್ ಉಮೂರ್.**

ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝನ್ನು ನಿಷ್ಠೆಯಿಂದ ನಿರ್ವಹಿಸುವರು; ಝಕಾತ್ ನೀಡುವರು; ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲ ಕಾರ್ಯಗಳ ಅಂತ್ಯ ಪರಿಣಾಮ ಅಲ್ಲಾಹನ ಕೈಯಲ್ಲಿದೆ. (ಪವಿತ್ರ ಖುರ್‌ಆನ್ 22: 42)

ಅಲ್‌ಹಮ್‌ದುಲಿಲ್ಲಾಹ್ (ಸರ್ವ ಸ್ತುತಿಗಳು ಅಲ್ಲಾಹನಿಗೆ ಸಲ್ಲುವವು) ಜಪಾನಿನ ಅಹ್ಮದಿಯಾ ಜಮಾಅತ್‌ಗೆ ತನ್ನ ಪ್ರಥಮ ಮಸ್‌ಜಿದ್ ನಿರ್ಮಿಸುವ ಭಾಗ್ಯ ಲಭಿಸಿತು. ಅಲ್ಲಾಹನು ಇದರ ನಿರ್ಮಾಣವನ್ನು ಎಲ್ಲ ರೀತಿಗಳಲ್ಲೂ ಅನುಗ್ರಹದಾಯಕವನ್ನಾಗಿ ಮಾಡಲಿ. ಮಸ್‌ಜಿದನ್ನು ಯಾವ ಉದ್ದೇಶಕ್ಕೋಸ್ಕರ ನಿರ್ಮಿಸಲಾಗುತ್ತಿದೆಯೋ ಆ ಉದ್ದೇಶವನ್ನು ನೀವು ಈಡೇರಿಸುವವರಾಗಲಿ. ಮಸ್‌ಜಿದ್ ನಿರ್ಮಿಸಿ ನಾವು ಜಪಾನಿಗೆ ಆಗಮಿಸಿದ ನಮ್ಮ ಉದ್ದೇಶಲಕ್ಷ್ಯ ಈಡೇರಿತು ಎಂದು ನೀವು ಹೇಳುವಂತಹ ವಿಷಯವಲ್ಲ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಉದ್ದೇಶವನ್ನು ಗಳಿಸಲು ಪ್ರಯತ್ನ ಮಾಡುವಾಗ ಮಾತ್ರ ನಾವು ನಮ್ಮ ಉದ್ದೇಶ ಈಡೇರಿಸಿದಂತೆ ಆಗುತ್ತದೆ. ಆ ಉದ್ದೇಶಲಕ್ಷ್ಯಗಳು, ನಾವು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸುವವರಾಗಬೇಕು ಮತ್ತು ನಾವು ಅವನ ಆರಾಧನೆಗೆ ಸಂಬಂಧಿಸಿದ ನಮ್ಮ ಕರ್ತವ್ಯಗಳನ್ನು ಈಡೇರಿಸುವವರಾಗಬೇಕು ಎಂಬುದಾಗಿದೆ. ನಾವು ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವವರಾಗಬೇಕು. ನಾವು ನಮ್ಮ ಈಗಿನ ಸ್ಥಿತಿಯನ್ನು ನೋಡಿಕೊಂಡು ಅದರಲ್ಲಿ ಇನ್ನೂ ಉನ್ನತ ಮಟ್ಟವನ್ನು ಗಳಿಸುವವರಾಗಬೇಕು. ನಾವು ಇಸ್ಲಾಮಿನ ಸುಂದರ ಉಪದೇಶಗಳನ್ನು ಇಲ್ಲಿರುವ ಪ್ರತಿಯೊಬ್ಬರಿಗೆ ತಲುಪಿಸುವವರಾಗಬೇಕು. ಜಪಾನಿನಲ್ಲಿ ಧಾರ್ಮಿಕ ಸ್ವಾತಂತ್ರ್ಯ ಲಭಿಸಿದಾಗ ಜಪಾನಿ ಜನಾಂಗದ ಜನರು ಧರ್ಮದ ಬಗ್ಗೆ ತಿಳಿಯಲು ಆಸಕ್ತರಾದರು. ಇಸ್ಲಾಮ್ ಧರ್ಮದ ಕಡೆಗೂ ಅವರು ಗಮನ ಹರಿಸಿದರು. ಈ ವಿಷಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿದಾಗ ಅವರು ಜಪಾನಿ ಜನಾಂಗಕ್ಕೆ ಇಸ್ಲಾಮಿನ ನೈಜ ತತ್ವಗಳನ್ನು ತಲುಪಿಸುವ ಪ್ರಯತ್ನ ಮಾಡುವ ಬಗ್ಗೆ ತೀವ್ರ ಅಭಿಲಾಷೆಯನ್ನು ಪ್ರಕಟಿಸಿದ್ದರು. ಅವರು ಬಹಳ ನೋವಿನಿಂದ ಹೀಗೆ ಹೇಳಿದರು: ಇತರ ಮುಸ್ಲಿಮರು ವಹೀ (ಅಲ್ಲಾಹನ ಸಂದೇಶವಾಣಿಯ) ಬಾಗಿಲನ್ನು ಮುಚ್ಚಿ ತಮ್ಮ ಧರ್ಮವನ್ನು ಮೃತಸಮಾನವಾಗಿ ಮಾಡಿರುವರು. ವಹೀಯ ಬಾಗಿಲು ಮುಚ್ಚಲ್ಪಟ್ಟಿದೆ ಎಂದು ಹೇಳಿ ಇತರ ಮುಸ್ಲಿಮರು ಸ್ವತಃ ತಮ್ಮ ಮೇಲೆಯೇ ದೌರ್ಜನ್ಯ ಮಾಡುತ್ತಾರೆ. ಮಾತ್ರವಲ್ಲ ಅನ್ಯರಿಗೆ ತಮ್ಮ ವಿಶ್ವಾಸಗಳನ್ನೂ ಕೆಟ್ಟ ನಡೆವಳಿಕೆಗಳನ್ನೂ ತೋರಿಸಿ ಅವರು ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸುವುದನ್ನು ಸಹ ತಡೆಯುತ್ತಾರೆ. ಅನ್ಯ ಧರ್ಮಗಳನ್ನು ಕೊನೆಗೊಳಿಸಲು ಇಚ್ಛಿಸುವ ಅವರ ಕೈಯಲ್ಲಿ ಯಾವ ಆಯುಧವಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನನ್ನು ನಂಬುವವರೊಂದಿಗೆ ಹೀಗೆ ಹೇಳಿದರು: ಯೋಗ್ಯತೆ ಮತ್ತು ಧೈರ್ಯ ಹೊಂದಿರುವ ಕೆಲವು ಜನರನ್ನು ನಮ್ಮ ಜಮಾಅತ್ ಈ ಕೆಲಸಕ್ಕೋಸ್ಕರ ಸನ್ನದ್ಧಗೊಳಿಸಬೇಕಾಗಿದೆ.

ಜಪಾನಿ ಜನತೆಗೆ ತಬ್ಲೀಗ್ ಮಾಡಲು ಒಂದು ಪುಸ್ತಕ ಬರೆಯುವ ಇಚ್ಛೆಯನ್ನೂ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಕಟಿಸಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ವಿಧೇಯರಾಗಿ ಅವರ ತತ್ವಗಳನ್ನು ಲೋಕದಾದ್ಯಂತ ಪ್ರಚಾರ ಮಾಡಲು ಆಗಮಿಸಿದ್ದರು. ಜಪಾನ್ ಸಹ ಅವರ ಕಾರ್ಯಕ್ಷೇತ್ರದಿಂದ ಹೊರತಾಗಿರಲಿಲ್ಲ. ದ್ವೀಪಗಳು ಸಹ ಅದರಿಂದ ಹೊರತಾಗಿಲ್ಲ. ಲೋಕದ ಇತರ ಭಾಗಗಳೂ ಅದರಿಂದ ಹೊರಗೆ ಇಲ್ಲ. ನಿಮಗೆ ಈ ದೇಶಕ್ಕೆ ಆಗಮಿಸಲು ಭಾಗ್ಯ ದೊರೆತುದು ಅಲ್ಲಾಹನ ಅನುಗ್ರಹ ಮತ್ತು ಔದಾರ್ಯವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಉಂಟಾದ ದುಃಖವು ಅನ್ಯ ಮುಸ್ಲಿಮರು ಅಲ್ಲಾಹನ ವಾಣಿಯು ಅವತೀರ್ಣವಾಗುವುದು ಕೊನೆಗೊಂಡಿದೆ ಎಂದು ಹೇಳಿ ಇಸ್ಲಾಮನ್ನು ನಿರ್ಜೀವ ಧರ್ಮವನ್ನಾಗಿ ಮಾಡಿದ್ದಾರೆ ಎಂಬುದಾಗಿತ್ತು. ಅವರಿಗೆ ಇಸ್ಲಾಮನ್ನು ಪ್ರಚಾರ ಮಾಡಲು ಹೇಗೆ ತಾನೆ ಸಾಧ್ಯವಾಗುವುದು. ಜಪಾನಿನ ಜನರಿಗಾಗಲಿ ಲೋಕದ ಇತರ ಯಾವುದೇ ದೇಶದ ಜನರಿಗಾಗಲಿ ಒಂದು ಮೃತ ಧರ್ಮದ ಆವಶ್ಯಕತೆ ಏನಿದೆ? ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಹ್ಮದಿಯರಾದ ನೀವು ಮಾತ್ರ ಇಸ್ಲಾಮ್ ಜೀವಂತ ಧರ್ಮ ಎನ್ನುವುದರ ಸಾಕ್ಷ್ಯ ನೀಡಬಲ್ಲಿರಿ. ಮತ್ತು ಅದರ ಒಳಿತುಗಳನ್ನು ಲೋಕಕ್ಕೆ ತೋರಿಸಬಲ್ಲಿರಿ. ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವ ಮಾರ್ಗವನ್ನು ಮುಚ್ಚಿಬಿಟ್ಟರೆ ಮುಸ್ಲಿಮರಿಗೂ ಅನ್ಯ ಧರ್ಮದವರಿಗೂ ಇರುವ ವ್ಯತ್ಯಾಸವೇನು. ಇಸ್ಲಾಮಿನ ಶ್ರೇಷ್ಠತೆ ಸಾಬೀತುಗೊಳಿಸಬೇಕಾದರೆ ಅಲ್ಲಾಹನೊಂದಿಗೆ ಜೀವಂತ ಸಂಬಂಧವನ್ನು ಸ್ಥಾಪಿಸುವುದರ ಮೂಲಕ ಅದನ್ನು ಸಾಬೀತುಗೊಳಿಸಬಹುದಾಗಿದೆ. ಅಲ್ಲಾಹನು ಯಾರನ್ನು ಪ್ರೀತಿಸುತ್ತಾನೋ ಅವನೊಂದಿಗೆ ಅಲ್ಲಾಹನು ಈಗಲೂ ಮಾತನಾಡುತ್ತಾನೆ ಎಂದು ಸಾಬೀತುಗೊಳಿಸಿ ಇಸ್ಲಾಮಿನ ಶ್ರೇಷ್ಠತೆಯನ್ನು ಲೋಕಕ್ಕೆ ತಿಳಿಸಿಕೊಡಬಹುದಾಗಿದೆ. ಆದುದರಿಂದ ಈ ಶ್ರೇಷ್ಠತೆಯನ್ನು ಸಾಬೀತುಗೊಳಿಸಲು ಪ್ರತಿಯೊಬ್ಬನು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಬೇಕಾದುದು ಆವಶ್ಯಕವಾಗಿದೆ. ಇಸ್ಲಾಮನ್ನು ಹರಡಲು ಯಾವುದೇ ಖಡ್ಗದ ಆವಶ್ಯಕತೆ ಇಲ್ಲ. ಇಸ್ಲಾಮನ್ನು ಪ್ರಚಾರ ಮಾಡಲು ಅಲ್ಲಾಹನ ಬಗ್ಗೆ ಸುದೃಢವೂ ಪರಿಪೂರ್ಣವೂ ಆಗಿರುವ ನಂಬಿಕೆ ಹೊಂದಿರುವ ಜನರ ಆವಶ್ಯಕತೆ ಇದೆ. ಇಸ್ಲಾಮನ್ನು ಹರಡಲು ಆರಾಧನೆಯ ಮಟ್ಟ ಉನ್ನತವಾಗಿರುವ ಜನರ ಆವಶ್ಯಕತೆ ಇದೆ. ಇಸ್ಲಾಮ್ ಧರ್ಮವನ್ನು ಹರಡಲು ಕೊಲೆ ಮತ್ತು ವಿಧ್ವಂಸಕ ಕಾರ್ಯಗಳನ್ನು ತ್ಯಜಿಸಿ ತಮ್ಮ ಆತ್ಮ ಶುದ್ಧೀಕರಣಕ್ಕೋಸ್ಕರ ಜಿಹಾದ್ ಮಾಡುವವರ ಮತ್ತು ತಮ್ಮ ಸ್ವಭಾವ ಗುಣಗಳನ್ನು ಪರಿಷ್ಕರಣೆ ಮಾಡುವವರ ಆವಶ್ಯಕತೆ ಇದೆ. ಈ ನಿಟ್ಟಿನಲ್ಲೂ ಅಹ್ಮದಿಯರ ಮೇಲೆ ಈಗ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಅಹ್ಮದಿಯರು ತಮ್ಮ ಆರಾಧನೆಯ ಮಟ್ಟವನ್ನು ವರ್ಧಿಸುವುದರೊಂದಿಗೆ ಇಸ್ಲಾಮಿನ ಸುಂದರ ತತ್ವಗಳೊಂದಿಗೆ ಅನ್ಯರಿಗೆ ತಬ್ಲೀಗ್ ಮಾಡಬೇಕಾಗಿದೆ.

ಆದುದರಿಂದ ಇಲ್ಲಿ ನಿರ್ಮಿಸಿದ ಮಸ್‌ಜಿದ್‌ಗೆ ಸಂಬಂಧಿಸಿ ನಿಮ್ಮ ಕರ್ತವ್ಯಗಳನ್ನು ಈಡೇರಿಸಿರಿ. ಐದು ಹೊತ್ತಿನ ನಮಾಝ್‌ಗಳನ್ನು ಈ ಮಸ್‌ಜಿದ್‌ನಲ್ಲಿ ಅನುಷ್ಠಿಸುವ ವ್ಯವಸ್ಥೆ ಮಾಡಿರಿ. ನಿಮ್ಮ ಆರಾಧನೆ ಮಟ್ಟವನ್ನು ವರ್ಧಿಸಿರಿ. ನಿಮ್ಮ ಅನುಷ್ಠಾನ ಕರ್ಮಗಳ ಸ್ಥಿತಿಯನ್ನು ಪರಿಶೋಧಿಸಿರಿ. ನಿಮ್ಮ ತಬ್ಲೀಗ್ ಕ್ಷೇತ್ರ ವನ್ನು ವಿಶಾಲಗೊಳಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಎಲ್ಲಿ ಇಸ್ಲಾಮ್ ಧರ್ಮದ ಪರಿಚಯವನ್ನು ಜನರಿಗೆ ಮಾಡಿಸಿ ಕೊಡಲು ನೀವು ಬಯಸುತ್ತೀರೋ ಅಲ್ಲಿ ಮಸ್‌ಜಿದ್ ನಿರ್ಮಿಸಿರಿ. ಆಗ ತಬ್ಲೀಗಿನ ಮಾರ್ಗಗಳು ಮತ್ತು ಪರಿಚಯಿಸುವ ಮಾರ್ಗಗಳು ತೆರೆಯುತ್ತಾ ಹೋಗುವುವು. ಆದುದರಿಂದ ಈ ಮಸ್‌ಜಿದ್ ನಿಮ್ಮ ಹೊಣೆಗಾರಿಕೆಗಳನ್ನು ಹೆಚ್ಚಿಸುತ್ತದೆ. ನಿಮ್ಮ ಆರಾಧನೆಯ ಮಟ್ಟವನ್ನು ಉನ್ನತ ಗೊಳಿಸುವ ಜೊತೆಗೆ ನೀವು ನಿಮ್ಮನ್ನು ತಬ್ಲೀಗ್ ಮಾಡಲು ಸನ್ನದ್ಧರನ್ನಾಗಿ ಮಾಡಬೇಕು. ಈಗ ಈ ಮಸ್‌ಜಿದನ್ನು ಉದ್ಘಾಟನೆ ಮಾಡುವ ಮೊದಲೇ ಇಲ್ಲಿನ ದೃಶ್ಯ ಮಾಧ್ಯಮಗಳು ಈ ಮಸ್‌ಜಿದ್ ಬಗ್ಗೆ ಸಾಕಷ್ಟು ಪ್ರಚಾರ ಮಾಡಿವೆ. ಒಂದು

ಶಾಂತಿಪ್ರಿಯ ಇಸ್ಲಾಮಿನ ಪರಿಚಯವನ್ನು ಈ ದೇಶದಲ್ಲಿ ಮಾಡಿಕೊಟ್ಟಿದೆ. ಈ ಪರಿಚಯಗೊಳಿಸುವಿಕೆಯ ಲಾಭ ಪಡೆಯುವುದು ಇಲ್ಲಿ ವಾಸಿಸುವ ಪ್ರತಿಯೊಬ್ಬ ಅಹ್ಮದಿಯ ಕೆಲಸವಾಗಿದೆ.

ಜಪಾನಿನ ಜನರಿಗೆ ಮಸ್‌ಜಿದ್ ಹೊಸದಾದ ವಸ್ತುವೇನೂ ಅಲ್ಲ. ಇಲ್ಲಿ ಅಂದಾಜು ನೂರು ಮಸ್‌ಜಿದ್‌ಗಳು ಇವೆ ಎಂದು ಹೇಳಲಾಗುತ್ತಿದೆ. ಆದರೂ ನಮ್ಮ ಮಸ್‌ಜಿದ್ ಉದ್ಘಾಟನೆಗೆ ಇಷ್ಟು ಮಹತ್ವ ನೀಡಲು ಕಾರಣವೇನು? ಇದಕ್ಕೆ ಕಾರಣವೆಂದರೆ, ಇತರ ಮುಸ್ಲಿಮರಿಂದ ದೂರ ಸರಿದು ಇಸ್ಲಾಮಿನ ನೈಜ ಚಿತ್ರ ನಾವು ತೋರಿಸುತ್ತೇವೆ. ಅದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೋರಿಸಿ ಕೊಟ್ಟ ನೈಜ ಚಿತ್ರವೇ ಆಗಿದೆ. ಅದನ್ನು ತೋರಿಸಲು ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯ ಸಂಧನಾದ ದಾಸನನ್ನು ಅಲ್ಲಾಹನು ಕಳುಹಿಸಿದನು. ಆದುದರಿಂದ ಈ ಚಿತ್ರವನ್ನು ಜನರಿಗೆ ತೋರಿಸಲು ಅಹ್ಮದಿಯರಾದ ನೀವು ಸಹ ನಿಮ್ಮ ಹೊಣೆಗಾರಿಕೆ ನಿಭಾಯಿಸಬೇಕು. ಈ ಹೊಣೆಗಾರಿಕೆಯನ್ನು ಈಡೇರಿಸಲು ನೀವು ಕೇವಲ ವಿಶ್ವಾಸಕ್ಕೆ ಸಂಬಂಧಿಸಿ ಮಾತ್ರ ದೃಢತೆ ಹೊಂದಿದರೆ ಸಾಕಾಗಲಾರದು. ನಿಮ್ಮ ಅನುಷ್ಠಾನ ಕರ್ಮಗಳಲ್ಲೂ ನಿಮ್ಮ ವರ್ತನೆಗಳಲ್ಲೂ ಉನ್ನತ ಮಟ್ಟವನ್ನು ತಲಪಲು ನೀವು ಪ್ರಯತ್ನ ಮಾಡಬೇಕು. ನೀವು ಪರಸ್ಪರ ಪ್ರೀತಿ ಮತ್ತು ಸಹೋದರ ಭಾವನೆಯನ್ನು ವರ್ಧಿಸುವವರಾಗಬೇಕು. ನಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೃಷ್ಟಿ ಯಾರ ಕಡೆ ಇದೆಯೋ, ಅವರ ಸತ್ಯಸಂಧ ಗುಲಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೃಷ್ಟಿ ಯಾರ ಕಡೆಗೆ ಇದೆಯೋ ಆ ಕಡೆಗೆ ನಮ್ಮ ದೃಷ್ಟಿಗಳನ್ನೂ ತಿರುಗಿಸಬೇಕು. ಇದರ ಪ್ರಸ್ತಾಪ ಪವಿತ್ರ ಖುರ್‌ಆನಿನಲ್ಲೂ ನಾವು ಕಾಣುತ್ತೇವೆ.

ಆದುದರಿಂದ ನಾವು ಈ ಕಾಲಘಟ್ಟದ ಇಮಾಮರನ್ನು ನಂಬಿದೆವು– ಅಲ್‌ಹಮ್‌ದುಲಿಲ್ಲಾಹ್, ನಾವು ಅಹ್ಮದಿಯರಾಗಿದ್ದೇವೆ– ಅಲ್‌ಹಮ್‌ದುಲಿಲ್ಲಾಹ್ ಎಂದು ಹೇಳಿದರೆ ಸಾಕಾಗಲಾರದು. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಯಾವ ವಿಷಯಗಳ ಕಡೆಗೆ ಅಲ್ಲಾಹನು ನಮ್ಮ ಗಮನ ಸೆಳೆದಿರುವನೋ ಆ ವಿಷಯಗಳ ಬಗ್ಗೆ ಈ ಕಾಲಘಟ್ಟದಲ್ಲಿ ಸಂಬೋಧಿಸಿರುವುದು ಅಹ್ಮದಿ ಮುಸ್ಲಿಮರನ್ನೇ ಆಗಿದೆ. ಏಕೆಂದರೆ ಈ ಕಾಲಘಟ್ಟದ ಇಮಾಮರನ್ನು ನಂಬಿದವರು ನಾವೇ ಆಗಿದ್ದೇವೆ. ಧರ್ಮವನ್ನು ಬಲಪಡಿಸಲು ಖಿಲಾಫತ್ ವ್ಯವಸ್ಥೆ ಜಾರಿಯಲ್ಲಿರುವುದು ನಮ್ಮ ಜಮಾಅತ್‌ನಲ್ಲಾಗಿದೆ. ಈ ಕಾಲಘಟ್ಟದ ಇಮಾಮರನ್ನು ನಂಬುವ ಮತ್ತು ಖಿಲಾಫತ್‌ನೊಂದಿಗೆ ಸಂಬಂಧ ಜೋಡಿಸಿದ್ದೇನೆ ಎಂದು ವಾದಿಸುವ ಒಬ್ಬ ಅಹ್ಮದಿ ಮುಸ್ಲಿಮನಿಗೋಸ್ಕರ ಅಲ್ಲಾಹನು ಕೆಲವು ತಾತ್ವಿಕ ವಿಷಯಗಳನ್ನು ವಿವರಿಸಿ ಕೊಟ್ಟಿದ್ದಾನೆ. ಒಂದನೆಯದಾಗಿ ನಮಾಝ್ ಅನುಷ್ಠಾನದ ಬಗ್ಗೆ ಲಕ್ಷ್ಯ ನೀಡಬೇಕು ಎಂದಾಗಿದೆ. ಇದು ನಿಮ್ಮನ್ನು ಸೃಷ್ಟಿಸಿದ ಮೂಲ ಉದ್ದೇಶವಾಗಿದೆ. ನಮಾಝ್ ಬಗ್ಗೆ ಶ್ರದ್ಧೆ ಇಲ್ಲದಿದ್ದರೆ, ಆರಾಧನೆ ಬಗ್ಗೆ ಶ್ರದ್ಧೆ ಇಲ್ಲದಿದ್ದರೆ ನಾವು ನೈಜ ಮುಸ್ಲಿಮರಾಗಿದ್ದೇವೆ ಎಂಬ ವಾದವು ತಪ್ಪಾಗುತ್ತದೆ. ನಾವು ಲೋಕದಲ್ಲಿ ಕ್ರಾಂತಿಯನ್ನು ಉಂಟುಮಾಡುವೆವು ಎಂಬ ವಾದವು ಸಹ ತಪ್ಪಾಗುತ್ತದೆ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ದಾಸನನ್ನು ನಂಬಿದ್ದೇವೆ ಎಂಬ ವಾದವೂ ತಪ್ಪು ಆಗುತ್ತದೆ. ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಆಗಮನದ ಉದ್ದೇಶವೇ ದಾಸರನ್ನು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸಿದವರನ್ನಾಗಿ ಮಾಡುವುದಾಗಿದೆ ಎಂದು ಹೇಳಿದ್ದಾರೆ. ಅವರ ಆಗಮನದ ಇನ್ನೊಂದು ಉದ್ದೇಶ ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡುವುದಾಗಿದೆ.

ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದಲ್ಲಿ ಅಲ್ಲಾಹನು ಹೇಳಿರುವುದು, ಅಲ್ಲಾಹನ ವಾಸ್ತವಿಕ ದಾಸರ ವೈಶಿಷ್ಟ್ಯ ಏನೆಂದರೆ, ಅವರು ಅಲ್ಲಾಹನಿಗೆ ಭಯ ಪಡುವವರಾಗಿದ್ದಾರೆ ಮತ್ತು ಅವನನ್ನು ಆರಾಧನೆ ಮಾಡುವವರಾಗಿದ್ದಾರೆ. ಅವರು ತಮ್ಮ ಸಂಪತ್ತಿನಿಂದ ಅಲ್ಲಾಹನ ಸಂಪ್ರೀತಿ ಗಳಿಸಲು ಮಾನವರ ಹಿತಕ್ಕೋಸ್ಕರ ಖರ್ಚು ಮಾಡುವವರಾಗಿದ್ದಾರೆ. ಅವರು ತಮ್ಮ ಜೀವಿತಗಳಲ್ಲಿ ಕ್ರಾಂತಿ ಉಂಟು ಮಾಡುತ್ತಾರಲ್ಲದೆ ತಮ್ಮ ಉದಾಹರಣೆ ತೋರಿಸಿ ಇತರರನ್ನೂ ತಮ್ಮ ಜೊತೆ ಸೇರಿಸುತ್ತಾರೆ. ಮತ್ತು ಜೀವಿತದ ಮೂಲ ಉದ್ದೇಶ ಏನೆಂದು ಹೇಳಿಕೊಡುತ್ತಾರೆ. ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯುವುದು ಹೇಗೆಂದು ಮನವರಿಕೆ ಮಾಡಿಕೊಡುತ್ತಾರೆ ಎಂದು ಹೇಳಲಾಗಿದೆ.

ನಮ್ಮ ಮೇಲೆ ಅಲ್ಲಾಹನು ಔದಾರ್ಯ ತೋರಿಸಿದ್ದಾನೆ. ಇತರ ಮುಸ್ಲಿಮರೆಲ್ಲರೂ ಚದುರಿ ಹೋಗಿದ್ದಾರೆ. ಅವರನ್ನು ಒಂದು ಕೈಯ ಕಡೆಗೆ ಆಹ್ವಾನಿಸುವ ಒಂದು ಧ್ವನಿ ಅವರಿಗಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಭಾಗ್ಯವನ್ನು ಅಲ್ಲಾಹನು ನಮಗೆ ನೀಡಿದನು. ಅವರ ನಂತರ ಜಾರಿಗೊಂಡ ಖಿಲಾಫತ್ ವ್ಯವಸ್ಥೆಯ ಮೂಲಕ ನಮಗೆ ಎಂತಹ ದೃಢತೆ ನೀಡಿದನೆಂದರೆ ನಾವು ಒಂದು ಶಬ್ದ ಕೇಳಿದಾಗ ಎದ್ದು ನಿಲ್ಲುವವರೂ ಕುಳಿತುಕೊಳ್ಳುವವರೂ ಆಗಿದ್ದೇವೆ. ದೃಢತೆ ಲಭಿಸುವುದು ಆಡಳಿತಾಧಿಕಾರ ಲಭಿಸಿದಾಗ ಮಾತ್ರವಲ್ಲ. ನಮ್ಮ ಬಗ್ಗೆ ಗೌರವ ಭಾವನೆ ಹುಟ್ಟಿರುವುದು ಮತ್ತು ಹೃದಯದಲ್ಲಿ ನೆಮ್ಮದಿ ಗಳಿಸುವುದು ಸಹ ದೃಢತೆಯಾಗಿದೆ. ಇನ್‌ಶಾಅಲ್ಲಾಹ್ ಸರಕಾರಗಳು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗುಲಾಮರಾಗಿ ನೈಜ ಇಸ್ಲಾಮನ್ನು ಮನವರಿಕೆ ಮಾಡುವ ಕಾಲವೂ ಬರಲಿದೆ. ಈಗಿನ ಈ ಲೋಕ ನಮ್ಮ ಕಡೆಗೆ ನೋಡಲು ಪ್ರಾರಂಭಿಸಿದೆ. ಇಸ್ಲಾಮಿನ ನೈಜ ತತ್ವ ಹೇಳಿಕೊಡಬೇಕೆಂದು ನಮ್ಮೊಡನೆ ಅದು ಆವಶ್ಯಪಡುತ್ತದೆ. ಇದು ಸಹ ಒಂದು ದೃಢತೆ ಮತ್ತು ಗೌರವ ಆಗಿದೆ. ಇದು ಲೋಕದ ಮೇಲೆ ಅಲ್ಲಾಹನು ಬೀರುವ ಪ್ರಭಾವದ ಪರಿಣಾಮವಾಗಿದೆ. ಆದರೆ ಇದರಿಂದ ಲಾಭ ಪಡೆಯಲು ಸಾಧ್ಯವಾಗುವುದು, ಅಲ್ಲಾಹನು ಯಾವ ವಿಷಯದ ಕಡೆಗೆ ಗಮನ ಸೆಳೆದಿರುವನೋ ಅವುಗಳ ಕಡೆಗೆ ಗಮನ ಹರಿಸುವವರಿಗೆ ಮಾತ್ರವಾಗಿದೆ. ಅಲ್ಲಾಹನು ಹೇಳುವುದೇನೆಂದರೆ ಅಲ್ಲಾಹನ ಅನುಗ್ರಹಗಳಿಗೆ ವಾರೀಸುದಾರರಾಗಲು ಒಳಿತುಗಳನ್ನು ಸ್ಥಿರವಾಗಿ ಮಾಡುವವರಾಗಬೇಕು. ಅವುಗಳನ್ನು ಹರಡಬೇಕು. ಕೆಡುಕುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು ಮತ್ತು ಅನ್ಯರನ್ನೂ ಸಹ ರಕ್ಷಿಸಬೇಕು. ನೀವು ಈ ಮೂಲ ತತ್ವಗಳನ್ನು ಪಾಲಿಸುತ್ತಾ ಇದ್ದರೆ ನೀವು ಅಭಿವೃದ್ಧಿ ಹೊಂದುತ್ತಾ ಇರುವಿರಿ.

ಪ್ರತಿಯೊಬ್ಬ ಅಹ್ಮದಿ ಯಾವಾಗಲೂ ನೆನಪಿಟ್ಟುಕೊಳ್ಳಬೇಕಾದುದು ನಿಮ್ಮ ಅನುಷ್ಠಾನ ಕರ್ಮಗಳನ್ನು ಉತ್ತಮಗೊಳಿಸಲು ಶ್ರದ್ಧೆ ನೀಡಬೇಕು. ಆಗ ನೀವು ಲೋಕವನ್ನು ನಿಮ್ಮ ಕಡೆಗೆ ಗಮನಿಸುವಂತೆ ಮಾಡಬಲ್ಲಿರಿ. ಅದರ ಮೂಲಕ ಧರ್ಮದಲ್ಲಿ ದೃಢತೆ ಉಂಟಾಗುವುದು. ಸರಕಾರಗಳು ಸಹ ಈ ಉಪದೇಶಗಳಿಗೆ ಅಧೀನವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮರಾಗುವುದು. ಬಹಳ ದೊಡ್ಡ ಉದ್ದೇಶ ಲಕ್ಷ್ಯವನ್ನು ಗಳಿಸಲು ಅಲ್ಲಾಹನು ನೈಜ ಮುಸ್ಲಿಮರಿಗೆ ಶುಭವಾರ್ತೆ ನೀಡುತ್ತಿದ್ದಾನೆ. ನಾವು ನಮ್ಮನ್ನು ಸೃಷ್ಟಿಯ ಉದ್ದೇಶವನ್ನು ಗುರುತಿಸಬೇಕು. ನಮ್ಮ ಶಾರೀರಿಕ ಆಶಾಭಿಲಾಷೆಗಳನ್ನು ಈಡೇರಿಸುವುದಕ್ಕೆ ಬದಲಾಗಿ ಅಲ್ಲಾಹನ ಸಂಪ್ರೀತಿ ಗಳಿಸಲು ಪ್ರಯತ್ನ ಮಾಡಬೇಕು. ಆದುದರಿಂದ ನೀವು ಪರಸ್ಪರ ಪ್ರೀತಿಯಿಂದ ವರ್ತಿಸಿರಿ. ಈ ಪ್ರೀತಿಯನ್ನು ಸಮಾಜದಲ್ಲೂ ಹರಡಿರಿ. ಅಲ್ಲಾಹನು ಬಯಸುವ ವೈಶಿಷ್ಟ್ಯಗಳನ್ನು ನಿಮ್ಮಲ್ಲಿ ಉಂಟುಮಾಡಿಕೊಳ್ಳಿರಿ. ಕೇವಲ ಮಸ್‌ಜಿದ್ ನಿರ್ಮಿಸುವುದರಿಂದ ಆ ವೈಶಿಷ್ಟ್ಯಗಳು ನಮ್ಮಲ್ಲಿ ಹುಟ್ಟಲಾರವು. ಆ ವೈಶಿಷ್ಟ್ಯಗಳನ್ನು ಗಳಿಸಲು ನಾವು ಪ್ರಯತ್ನ ಮಾಡಬೇಕಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಆ ವೈಶಿಷ್ಟ್ಯಗಳನ್ನು ಹೀಗೆ ವಿವರಿಸಲಾಗಿದೆ:

اَلتَّائِبُونَ الْعَابِدُونَ الْحَامِدُونَ السَّائِحُونَ الرَّاكِعُونَ السَّاجِدُونَ الآمِرُونَ بِالْمَعْرُوفِ وَالنَّاهُونَ عَنْ الْمُنكَرِ وَالْحَافِظُونَ لِحُدُودِ اللّٰهِ وَبَشِّرْ الْمُؤْمِنِينَ

**ಅತ್ತಾಯಿಬೂನಲ್ ಆಬಿದೂನಲ್ ಹಾಮಿದೂನ ಸ್ಸಾಯಿಹೂನ ರ್ರಾಕಿಊನ ಸ್ಸಾಜಿದೂನಲ್ ಆಮಿರೂನ ಬಿಲ್‌ಮಅ್‌ರೂಫಿ ವನ್ನಾಹೂನ ಅನಿಲ್ ಮುಂಕರಿ ವಲ್ ಹಾಫಿಝೂನ ಲಿ ಹುದೂದಿಲ್ಲಾಹಿ, ವಬಶ್ಶಿರಿಲ್ ಮೂಮಿನೀನ್.**

ಅವರು ಪಶ್ಚಾತ್ತಾಪಪಟ್ಟು ಅಲ್ಲಾಹನೆಡೆಗೆ ಮರಳುವವರೂ ಅಲ್ಲಾಹನನ್ನು ಆರಾಧಿಸುವವರೂ ಅಲ್ಲಾಹನ ಸ್ತುತಿ ಕೀರ್ತನೆ ಮಾಡುವವರೂ ವ್ರತಾನುಷ್ಠಾನ ಮಾಡುವವರೂ ನಮಿಸುವವರೂ ಸಾಷ್ಟಾಂಗ ಪ್ರಣಾಮ ಮಾಡುವವರೂ ಒಳಿತನ್ನು ಉಪದೇಶಿಸುವವರೂ ಕೆಡುಕನ್ನು ತಡೆಯುವವರೂ ಅಲ್ಲಾಹನ ಕಟ್ಟುಕಟ್ಟಳೆಗಳನ್ನು ಪಾಲಿಸುವವರೂ ಆಗಿದ್ದಾರೆ. ಸತ್ಯವಿಶ್ವಾಸಿಗಳಿಗೆ ನೀನು ಶುಭವಾರ್ತೆಯನ್ನು ತಿಳಿಸು. (ಪವಿತ್ರ ಖುರ್‌ಆನ್ 9: 112)

ಒಬ್ಬ ಮನುಷ್ಯನು ನೈಜ ವಿಶ್ವಾಸಿಯಾಗಲು ಪ್ರಥಮ ಶರತ್ತು ತೌಬ ಪ್ರಾರ್ಥನೆ ಮಾಡಬೇಕೆಂದಾಗಿದೆ. ತನ್ನ ಪಾಪಕೃತ್ಯಗಳ ಬಗ್ಗೆ ಪಶ್ಚಾತ್ತಾಪಗೊಂಡು ಪೂರ್ಣವಾಗಿ ಅವುಗಳಿಂದ ದೂರ ಸರಿಯುವುದಾಗಿ ಪ್ರತಿಜ್ಞೆ ಮಾಡಿ ಕ್ಷಮೆ ಯಾಚಿಸಬೇಕು. ಪಾಪ ಕೃತ್ಯಗಳೆಂದರೆ ದೊಡ್ಡ ದೊಡ್ಡ ಪಾಪ ಕೃತ್ಯಗಳು ಮಾತ್ರವಲ್ಲ. ಜಮಾಅತಿನ ವ್ಯವಸ್ಥೆಯಲ್ಲಿ ಕೇಡನ್ನು ಉಂಟುಮಾಡುವ ಚಿಕ್ಕ ಪುಟ್ಟ

ತಪ್ಪುಗಳು ಸಹ ಪಾಪ ಕೃತ್ಯಗಳೇ ಆಗಿವೆ. ತೌಬ ಮಾಡಿ ಪ್ರತಿಜ್ಞೆ ಮಾಡಿದ ನಂತರ ಅದರ ಪ್ರಕಾರ ವರ್ತಿಸಿ ಅಲ್ಲಾಹನ ಆರಾಧನೆ ಮಾಡುವುದು ಸತ್ಯವಿಶ್ವಾಸಿಗೆ ಕಡ್ಡಾಯ ಕರ್ತವ್ಯವಾಗಿದೆ. ಅಲ್ಲಾಹನ ಇಷ್ಟ ಪ್ರಕಾರ ತನ್ನ ಜೀವಿತವನ್ನು ಕ್ರಮಪಡಿಸುವುದು ಸತ್ಯವಿಶ್ವಾಸಿಗೆ ಕಡ್ಡಾಯವಾಗಿದೆ. ಆದರೆ ಅಲ್ಲಾಹನ ಇಷ್ಟವೇಂದರೆ ಏನು? ಇದರ ಬಗ್ಗೆ ಮೊದಲು ಸಹ ನಾನು ಪ್ರಸ್ತಾಪಿಸಿದ್ದೇನೆ. ಅಲ್ಲಾಹನ ಇಷ್ಟ ವೇನೆಂದರೆ ಮನುಷ್ಯನು ಅಲ್ಲಾಹನನ್ನು ಆರಾಧಿಸಬೇಕು ಎನ್ನುವುದಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳಿದ್ದಾನೆ:

وَمَا خَلَقْتُ الْجِنَّ وَالإِنسَ إِلاَّ لِيَعْبُدُونِ

**ವಮಾ ಖಲಖ್ತುಲ್ ಜಿನ್ನ ವಲ್ ಇನ್‌ಸ ಇಲ್ಲಾ ಲಿಯಅ್‌ಬುದೂನ್.**

ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. (ಪವಿತ್ರ ಖುರ್‌ಆನ್ 51: 57)

ಆದುದರಿಂದ ಶ್ರೀಮಂತರು ಮತ್ತು ದೊಡ್ಡ ದೊಡ್ಡ ಉದ್ದಿಮೆದಾರರು ಆರಾಧನೆಯಿಂದ ಹೊರಗೆ ಉಳಿಯುವ ಅವಕಾಶವೇ ಇಲ್ಲ. ಅದೇ ರೀತಿ ಸಾಮಾನ್ಯ ಮನುಷ್ಯರು ಮತ್ತು ಬಡವರು ಸಹ ಆರಾಧನೆ ಬಗ್ಗೆ ಉದಾಸೀನತೆ ಯಿಂದ ವರ್ತಿಸಲು ಆಸ್ಪದವಿಲ್ಲ.

ಅಲ್ಲಾಹನ ಸನ್ನಿಧಿಯಲ್ಲಿ ತನ್ನ ಎಲ್ಲವನ್ನೂ ಬಲಿದಾನವಾಗಿ ನೀಡುತ್ತಾ ತನ್ನ ಅಹಂಭಾವವನ್ನು ಹಿಂದೆ ಸರಿಸಿ ತನ್ನ ಗೌರವವನ್ನು ಮರೆತುಬಿಟ್ಟು ತನ್ನ ಗೌರವವನ್ನು ಬೆನ್ನ ಹಿಂದೆ ಎಸೆದು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಜಮಾಅತಿನ ನಿಝಾಮಿಗೆ (ಆಡಳಿತ ವ್ಯವಸ್ಥೆಗೆ) ಬದ್ಧನಾಗುವ ಆವಶ್ಯಕತೆ ಇದೆ. ಜಮಾಅತಿನ ವ್ಯವಸ್ಥೆಯನ್ನು ಅನುಸರಿಸಬೇಕೆಂಬುದು ಸಹ ಅಲ್ಲಾಹನ ಆಜ್ಞೆ ಪ್ರಕಾರವಾಗಿದೆ. ಅದು ಸಹ ಅಲ್ಲಾಹನ ಸಾಮೀಪ್ಯ ದೊರಕಿಸಿ ಕೊಡುವುದು. ಸಾಷ್ಟಾಂಗ ಪ್ರಣಾಮ ಅಲ್ಲಾಹನ ಸಾಮೀಪ್ಯ ಗಳಿಸಲಿಕೋಸ್ಕರವಾಗಿರುತ್ತದೆ. ಮನುಷ್ಯನಲ್ಲಿ ವಿನಯ ತಲೆದೋರುವಾಗ ಅಲ್ಲಾಹನ ಸಾಮೀಪ್ಯ ಲಭಿಸುತ್ತದೆ. ನಾವು ಅದನ್ನು ಅನ್ವೇಷಿಸ ಬೇಕು. ವಿನಯಾನ್ವಿತ ಸಾಷ್ಟಾಂಗ ಪ್ರಣಾಮ ಮಾಡುವ ಭಾಗ್ಯ ನಮಗೆ ಲಭಿಸಿದರೆ ಅಲ್ಲಾಹನ ಸಾಮೀಪ್ಯ ಪಡೆಯಲು ಅತ್ಯಧಿಕ ಪ್ರಯತ್ನ ನಡೆಸಿದಾಗ ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯದೊಂದಿಗೆ ಅನ್ಯರನ್ನು ಸಹ ಒಳಿತುಗಳ ಬಗ್ಗೆ ಉಪದೇಶಿಸಿ ಅವರನ್ನು ಸಹ ಅಲ್ಲಾಹನ ಸಮೀಪಕ್ಕೆ ತನ್ನಿರಿ. ನೀವು ತಬ್ಲೀಗ್ ಮಾಡುತ್ತಾ, ಲೌಕಿಕ ವ್ಯವಹಾರಗಳಲ್ಲಿ ಮುಳುಗಿರುವವರನ್ನು ಅಲ್ಲಾಹನ ಮುಂದೆ ಬಾಗುವವರ ನ್ನಾಗಿ ಮಾಡಿರಿ. ಅನ್ಯರನ್ನು ಸಹ ಪಾಪದಲ್ಲಿ ಮುಳುಗಿ ಹೋಗುವುದರಿಂದ ಮತ್ತು ನರಕಾಗ್ನಿಯಲ್ಲಿ ಬೀಳುವುದರಿಂದ ರಕ್ಷಿಸಿರಿ. ಲೋಕವನ್ನು ಅಲ್ಲಾಹನ ಕೋಪದಿಂದ ರಕ್ಷಿಸಬೇಕು ಎಂಬುದೇ ಇಂದು ಪ್ರತಿಯೊಬ್ಬ ಅಹ್ಮದಿ ನಿರ್ವಹಿಸಬೇಕಾದ ಅತಿ ದೊಡ್ಡ ಹೊಣೆಗಾರಿಕೆಯಾಗಿದೆ.

ಮತ್ತೆ ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: ಸತ್ಯವಿಶ್ವಾಸಿಯಾದವನು ಅಲ್ಲಾಹನ ಕಟ್ಟುಕಟ್ಟಳೆಗಳನ್ನು ಸಂರಕ್ಷಿಸುವವನಾಗಿರುತ್ತಾನೆಂದು. ನೀವು ಆ ವಿಷಯ ಗಳನ್ನು ಲಕ್ಷಿಸಿರಿ. ಅವುಗಳನ್ನು ರಕ್ಷಿಸಿರಿ. ಎಂದರೆ ಅವುಗಳ ಪ್ರಕಾರ ವರ್ತಿಸಲು ಪೂರ್ಣ ಬದ್ಧರಾಗಿ ಪ್ರಯತ್ನ ಮಾಡಿರಿ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಿದ ವಿಷಯಗಳನ್ನು ಸಂರಕ್ಷಿಸುವುದು ನಮ್ಮ ಕೆಲಸವಾಗಿದೆ. ಅಲ್ಲಾಹನ ಸಂದೇಶವಾಹಕರು ಹೇಳಿದ ಮಾತುಗಳ ಕಡೆಗೆ ಲಕ್ಷ್ಯ ನೀಡುವುದು ಸಹ ನಮಗೆ ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನೀಡಿದ ಉಪದೇಶಗಳನ್ನೂ ಅವರು ನಮ್ಮಿಂದ ಏನನ್ನು ಪ್ರತೀಕ್ಷಿಸುತ್ತಾರೆ ಎಂಬುದರ ಬಗ್ಗೆ ಸಹ ಗಮನ ಹರಿಸಿರಿ. ಅವುಗಳನ್ನು ಆಲಿಸಿ ಅವುಗಳ ಪ್ರಕಾರ ಕೆಲಸ ಮಾಡಲು ಪ್ರಯತ್ನಿಸಿರಿ. ಅದೇ ರೀತಿ ಆಯಾಕಾಲದ ಖಲೀಫರು ನೀಡುವ ಉಪದೇಶಗಳನ್ನು ಸಹ ಆಲಿಸಿ ಅವುಗಳ ಪ್ರಕಾರ ವರ್ತಿಸಲು ಪ್ರಯತ್ನಿಸಿರಿ. ನಿಮ್ಮ ವಿಶ್ವಾಸ ಮತ್ತು ಕರ್ಮಗಳನ್ನು ಸಂರಕ್ಷಿಸಿರಿ. ಈ ಕಾಲದಲ್ಲಿ ಅಲ್ಲಾಹನು ನಮಗೆ ಖಿಲಾಫತ್ ಎಂಬ ಅನುಗ್ರಹ ನೀಡಿದ್ದಾನೆ. ಅದನ್ನು ಗೌರವಿಸಿರಿ. ಧರ್ಮದ ದೃಢತೆಗೆ ಇದು ಆವಶ್ಯಕ ವೆಂದು ಅಲ್ಲಾಹನು ಹೇಳಿರುವನು. ಈ ಎಲ್ಲ ವಿಷಯಗಳನ್ನು ಅನುಷ್ಠಾನಕ್ಕೆ ತರುವ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಶುಭವಾರ್ತೆ ನೀಡಿದ್ದಾನೆ. ನೀವು ನಿಮ್ಮನ್ನು ಪರಿಶೋಧಿಸಿರಿ. ಯಾವ ಸತ್ಯವಿಶ್ವಾಸಿಗಳಿಗೆ ಅಲ್ಲಾಹನು ಶುಭವಾರ್ತೆ ನೀಡಿರು ವನೋ ಆ ಸತ್ಯವಿಶ್ವಾಸಿಗಳೊಂದಿಗೆ ಸೇರುವವರಾಗಿರಿ.

ಈ ಕಾಲದ ಆವಿಷ್ಕಾರಗಳನ್ನು ಅಲ್ಲಾಹನು ನಮಗೆ ಅಧೀನಗೊಳಿಸಿರುವನು. ಅದು ಅಲ್ಲಾಹನ ಔದಾರ್ಯವಾಗಿದೆ. ನಮ್ಮ ಜಮಾಅತ್ ಎಂ.ಟಿ.ಎ. ಗೋಸ್ಕರ ಲಕ್ಷಾಂತರ ಡಾಲರ್ ಹಣ ಖರ್ಚು ಮಾಡುತ್ತಿದೆ. ಇದು ತಬ್ಲೀಗ್ ಮತ್ತು ತರಬೇ ತಿಯ ಅತ್ಯುತ್ತಮ ಮಾರ್ಗವಾಗಿದೆ. ಎಲ್ಲದಕ್ಕಿಂತಲೂ ಮುಖ್ಯವಾಗಿ ಆಯಾಕಾಲದ ಖಲೀಫರೊಂದಿಗೆ ಸಂಬಂಧ ಹೊಂದುವ ಮಾರ್ಗವಾಗಿದೆ. ತಂದೆ ತಾಯಂದಿರು ಮುಂದಿನ ಪೀಳಿಗೆಯನ್ನು ರಕ್ಷಿಸಲು ಆಯಾಕಾಲದ ಖಲೀಫರ ಕಾರ್ಯಕ್ರಮ ಗಳೊಂದಿಗೆ ತಮ್ಮನ್ನು ಜೋಡಿಸಬೇಕು. ಮತ್ತು ತಮ್ಮ ಮಕ್ಕಳನ್ನೂ ಸಹ ಜೋಡಿಸ ಬೇಕು. ಅನ್ಯರಾದ ಕೆಲವರು ನನಗೆ ಬರೆಯುತ್ತಾರೆ: ನಿಮ್ಮ ಖುತ್‌ಬ ಮತ್ತು ಇತರ ಕಾರ್ಯಕ್ರಮಗಳನ್ನು ಆಲಿಸಿ ನಮಗೆ ಧರ್ಮದ ವಾಸ್ತವಿಕತೆಯ ಅರಿವು ಲಭಿಸಿತು ಎಂದು. ಆದುದರಿಂದ ಅಹ್ಮದಿಯರು ಧರ್ಮವನ್ನು ಕಲಿತುಕೊಳ್ಳಲು ಹಾಗೂ ತಮ್ಮ ಸುಧಾರಣೆ ಮಾಡಲು ಮತ್ತು ಏಕತೆ ಕಾಪಾಡಲು ಆಯಾಕಾಲದ ಖಲೀಫರ ಕಾರ್ಯಕ್ರಮಗಳ ಜೊತೆ ತಮ್ಮನ್ನು ಜೋಡಿಸುವುದು ಅತ್ಯಂತ ಆವಶ್ಯಕವಾಗಿದೆ. ಜಪಾನಿ ವಂಶಜರಾದ ಅಹ್ಮದಿಯರೊಂದಿಗೆ ನಾನು ಹೇಳಲು ಬಯಸುತ್ತೇನೆ. ನೀವು ಧರ್ಮದ ಬಗ್ಗೆ ಜ್ಞಾನಗಳಿಸಿರಿ. ನಿಮ್ಮ ವಿಶ್ವಾಸದಲ್ಲಿ ದೃಢತೆ ಗಳಿಸಿರಿ. ಒಬ್ಬ ಜನ್ಮತಃ ಅಹ್ಮದಿ ಅಥವಾ ಹಳೆಯ ಅಹ್ಮದಿ ಧರ್ಮದ ವಿಷಯದಲ್ಲಿ ಬಲಹೀನ ನಾಗಿದ್ದರೆ ನೀವು ಅವನಿಗೆ ಮಾರ್ಗದರ್ಶನ ನೀಡುವವರಾಗಿರಿ. ನಾನು ಇದರ ಮೊದಲು ಸಹ ಹೇಳಿದ್ದೇನೆ. ಅಲ್ಲಾಹನು ಯಾರ ಸಂಬಂಧಿಕನೂ ಅಲ್ಲ. ಯಾರು ಒಳ್ಳೆಯ ಕೆಲಸ ಮಾಡುತ್ತಾನೋ ಯಾರು ತನ್ನ ಆರಾಧನೆಯ ಮಟ್ಟವನ್ನು ಉನ್ನತ ಗೊಳಿಸುತ್ತಾನೋ ಅವನ ಜೊತೆಗೆ ಅಲ್ಲಾಹನ ಬೆಂಬಲ ಮತ್ತು ಸಹಾಯ ವಿರುವುದು. ಪ್ರತಿಯೊಬ್ಬ ಅಹ್ಮದಿ ಈ ಮೂಲ ತತ್ವವನ್ನು ತನ್ನ ಮುಂದಿರಿಸಿ ಜೀವಿಸುವಂತೆ ಅಲ್ಲಾಹನು ಮಾಡುವವನಾಗಲಿ. ಈ ಮಸ್‌ಜಿದ್ ಪ್ರತಿಯೊಬ್ಬ ಅಹ್ಮದಿಯ ವಿಶ್ವಾಸದಲ್ಲೂ ಮತ್ತು ಕರ್ಮಗಳಲ್ಲೂ ಒಂದು ಕ್ರಾಂತಿಕಾರಿ ಬದಲಾ ವಣೆ ಉಂಟುಮಾಡುವಂತಹದಾಗಲಿ. ಕೇವಲ ತಾತ್ಕಾಲಿಕ ಉತ್ಸಾಹದಿಂದ ಮಸ್‌ಜಿದ್ ನಿರ್ಮಿಸುವವರಾಗದಿರಲಿ. ವಾಸ್ತವಿಕವಾಗಿ ಮಸ್‌ಜಿದ್‌ಗೆ ಸಂಬಂಧಿ ಸಿದ ಕರ್ತವ್ಯಗಳನ್ನು ಈಡೇರಿಸುವವರಾಗಲಿ.

ಈ ಮಸ್‌ಜಿದ್‌ಗೆ ಸಂಬಂಧಿಸಿ ಕೆಲವು ಮಾಹಿತಿಗಳನ್ನು ನೀಡಲು ಬಯಸು ತ್ತೇನೆ. ಈ ಮಸ್‌ಜಿದ್ ನಿರ್ಮಿಸಿದ ಸ್ಥಳದ ವಿಸ್ತೀರ್ಣ ಒಂದು ಸಾವಿರ ಚದರ ಮೀಟರ್ ಆಗಿದೆ. ಎರಡು ಅಂತಸ್ತಿನ ಕಟ್ಟಡವಾಗಿದೆ. ಇದು ಈ ಪ್ರದೇಶದ ಮುಖ್ಯ ಹೆದ್ದಾರಿಯ ಬದಿಯಲ್ಲಿದೆ. ಈ ಹೆದ್ದಾರಿ ಈ ಪ್ರದೇಶದ ಎಲ್ಲ ದೊಡ್ಡ ಮಾರ್ಗಗಳನ್ನು ಪರಸ್ಪರ ಜೋಡಿಸುತ್ತದೆ. ಈ ಮಸ್‌ಜಿದ್ ಹೆದ್ದಾರಿಯ ಎಕ್ಸಿಟ್‌ನ ಸಮೀಪ ಇದೆ. ಇಲ್ಲಿ ಎರಡು ಹೆದ್ದಾರಿಗಳು ಬಂದು ಸೇರುತ್ತವೆ. ರೈಲ್ವೇ ಸ್ಟೇಶನ್ ಬಹಳ ಸಮೀಪವಿದೆ. ಈ ರೈಲ್ವೇ ಸ್ಟೇಶನ್‌ನಿಂದ ನಗೋಯ ಇಂಟರ್‌ನೇಶನಲ್ ಏರ್‌ಪೋರ್ಟ್‌ಗೆ ನೇರವಾಗಿ ರೈಲು ಬಂಡಿ ಹೋಗುತ್ತಿದೆ. ಈ ನಿಟ್ಟಿನಲ್ಲೂ ಬಹಳ ಅನುಕೂಲತೆಗಳಿವೆ. ಈ ಮಸ್‌ಜಿದ್‌ಗೆ **ಬೈತುಲ್ ಅಹದ್** ಎಂದು ನಾನು ಹೆಸರಿಸಿದೆ. ಈ ಮಸ್‌ಜಿದ್‌ಗೆ ಖಾದಿಯಾನಿನ ಮಸ್‌ಜಿದ್ ಮುಬಾರಕ್ ಮತ್ತು ದಾರುಲ್ ಮಸೀಹ್‌ನಿಂದ ತಂದ ಇಟ್ಟಿಗೆಗಳನ್ನು ತಬರ್ರುಕಾಗಿ ಬಳಸಲಾಗಿದೆ. ಪ್ರಥಮ ಅಂತಸ್ತಿನಲ್ಲಿ ಮಸ್‌ಜಿದಿನ ಮುಖ್ಯ ಭವನವಿದೆ. ಇದರಲ್ಲಿ ಐನೂರಕ್ಕಿಂತ ಹೆಚ್ಚು ಜನರು ನಮಾಝ್ ಅನುಷ್ಠಿಸಬಹುದಾಗಿದೆ. ಅದರ ಮೇಲಿನ ಅಂತಸ್ತಿನಲ್ಲಿ ಮಹಿಳೆಯರ ಪ್ರಾರ್ಥನೆಯ ಹಾಲ್ ಇದೆ. ಮಸ್‌ಜಿದಿನ ಅಂಗಳದಲ್ಲಿ ಚಪ್ಪರಹಾಕಿ ಕಾರ್ಯಕ್ರಮಗಳನ್ನು ಜರಗಿಸಬಹುದಾಗಿದೆ. ಎಲ್ಲವನ್ನೂ ಸೇರಿಸಿದರೆ ಒಟ್ಟು ಎಂಟು ನೂರು ಜನರು ಸಾಮೂಹಿಕ ನಮಾಝ್ ಅನುಷ್ಠಿಸಬಹುದಾಗಿದೆ. ಮೇಲಿನ ಅಂತಸ್ತಿನಲ್ಲಿ ಜಮಾಅತಿನ ಕಚೇರಿ, ಲೈಬ್ರರಿ, ಮಹಿಳೆಯರಿಗೆ ನಮಾಝ್ ಅನುಷ್ಠಿಸುವ ಸ್ಥಳ, ಮುರಬ್ಬಿ ವಾಸ ಸ್ಥಳ, ಅತಿಥಿಗಳಿಗೆ ಕೋಣೆಗಳು ಇವೆ. ಮೊದಲೇ ಇದ್ದ ಕಟ್ಟಡ ಖರೀದಿಸಿ ಅನಂತರ ಅದರಲ್ಲಿ ಬದಲಾವಣೆಗಳನ್ನು ಮಾಡಲಾಯಿತು. ಈ ಕಟ್ಟಡಕ್ಕೆ ಮಸ್‌ಜಿದ್‌ನ ರೂಪ ನೀಡಲು ನಾಲ್ಕು ಮೂಲೆಗಳಲ್ಲೂ ಮಿನಾರಗಳನ್ನು ನಿರ್ಮಿಸಲಾಗಿದೆ. ಗುಂಬಝ್ ಸಹ ನಿರ್ಮಿಸಲಾಗಿದೆ. ಮಾರ್ಗದ ಬದಿಯಲ್ಲಿ ಇರುವ ಕಾರಣ ಜನರ ಶ್ರದ್ಧೆ ಆಕರ್ಷಿಸುವ ಬಹಳ ದೊಡ್ಡ ಕೇಂದ್ರವಾಗಿದೆ. ಈ ಮಸ್‌ಜಿದ್ ಜಪಾನಿನ ಮಾತ್ರವಲ್ಲ ಉತ್ತರ ಪೂರ್ವ ದೇಶಗಳಾದ ಚೀನ, ಕೊರಿಯಾ, ಹಾಂಗ್‌ಕಾಂಗ್, ತೈವಾನ್ ಪ್ರದೇಶಗಳ ಜಮಾಅತಿನ ಪ್ರಥಮ ಮಸ್‌ಜಿದ್ ಆಗಿದೆ. ಇತರ ಪ್ರದೇಶಗಳಲ್ಲೂ ಮಸ್‌ಜಿದ್ ನಿರ್ಮಿಸುವ ಮಾರ್ಗ ಈ ಮಸ್‌ಜಿದ್ ಮೂಲಕ ಅಲ್ಲಾಹನು ತೆರೆದು ಕೊಡಲಿ. ಅಲ್ಲಿ ಸಹ ಜಮಾಅತ್‌ಗಳು ಅಭಿವೃದ್ಧಿಗಳಿಸಲಿ. ಮತ್ತು ಮಸ್‌ಜಿದ್‌ಗಳನ್ನು ನಿರ್ಮಿಸುವಂತಾಗಲಿ.

ಒಂದು ಕಟ್ಟಡವನ್ನು ಖರೀದಿಸಿ ಅದನ್ನು ಮಸ್‌ಜಿದಾಗಿ ಬದಲಾಯಿಸಲಾಗಿತ್ತು. ಈ ಕಟ್ಟಡವನ್ನು 2013 ಜೂನ್ ತಿಂಗಳಲ್ಲಿ ಖರೀದಿಸಲಾಗಿತ್ತು. ಈ ಖರೀದಿ ಮತ್ತು ನಿರ್ಮಾಣ ಕೆಲಸಗಳಿಗಾಗಿ ಒಟ್ಟಾರೆ ಹದಿಮೂರು ಕೋಟಿ ಎಪ್ಪತ್ತೆಂಟು ಲಕ್ಷ ಯೆನ್ ಖರ್ಚಾಗಿದೆ. ಇದು ಅಂದಾಜು ಹನ್ನೆರಡು ಲಕ್ಷ ಡಾಲರ್‌ಗೆ ಸಮವಾಗಿದೆ. ಇದರ ಅರ್ಧಾಂಶಕ್ಕಿಂತ ಸ್ವಲ್ಪ ಕಡಿಮೆ ಹಣ ಕೇಂದ್ರ ಗ್ರಾಂಟಾಗಿ ನೀಡಿತು. ಉಳಿದ ಹಣ ಇಲ್ಲಿನ ಚಿಕ್ಕ ಜಮಾಅತ್ ಬಹಳ ದೊಡ್ಡ ತ್ಯಾಗ ಮಾಡಿ ಈ ಮಸ್‌ಜಿದ್ ನಿರ್ಮಾಣಕ್ಕೆ ತನ್ನ ಪಾಲು ನೀಡಿತು. ಅಲ್ಲಾಹನು ಅವರೆಲ್ಲರಿಗೂ ಉತ್ತಮ ಪ್ರತಿಫಲ ನೀಡಲಿ. ಇದಕ್ಕೋಸ್ಕರ ಬಹಳ ತ್ಯಾಗ ಮಾಡಿದವರ ಉದಾಹರಣೆಗಳೂ ಇವೆ. ಒಬ್ಬ ಅಹ್ಮದಿ ಹೀಗೆ ಹೇಳುತ್ತಾರೆ: ಮಸ್‌ಜಿದ್ ನಿರ್ಮಾಣದ ಬಗ್ಗೆ ಸೆಕ್ರೆಟರಿ ಮಾಲ್ ಚಂದ ನೀಡಲು ಹೇಳಿದಾಗ ಈ ಅಹ್ಮದಿ ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದರು. ಅವರ ಪತ್ನಿ ಜಪಾನಿ ವಂಶಜೆಯಾಗಿದ್ದರು. ಆಕೆಯೊಂದಿಗೆ ಮಸ್‌ಜಿದ್‌ಗೆ ಚಂದ ಕೊಡುವ ಬಗ್ಗೆ ಹೇಳಿದಾಗ ಆಕೆ ಅನೇಕ ಡಬ್ಬಿಗಳನ್ನು ತಂದು ಇಟ್ಟರು. ಆ ಡಬ್ಬಿಗಳಿಂದ ದೊರಕಿದ ಹಣ ಅಂದಾಜು ಹತ್ತು ಸಾವಿರ ಡಾಲರ್‌ನಷ್ಟಿತ್ತು.

ಇದೇ ರೀತಿ ಅಲ್ಲಿನ ಜಮಾಅತಿನ ಅಧ್ಯಕ್ಷರು ಬರೆಯುತ್ತಾರೆ: ಕೆಲವರ ಆರ್ಥಿಕ ಸ್ಥಿತಿ ಉತ್ತಮವಾಗಿರಲಿಲ್ಲ ಎಂದು ನನಗೆ ತಿಳಿದಿತ್ತು. ಅಂತಹ ಜನರು ಸಹ ಖರ್ಚು ಕಡಿಮೆ ಮಾಡಿ ಅಲ್ಲಾಹನ ಭವನಕ್ಕೋಸ್ಕರ ತ್ಯಾಗ ಮಾಡುವ ಭಾಗ್ಯ ಗಳಿಸಿದರು. ಒಮ್ಮೆ ಜಮಾಅತ್ ನೀಡಬೇಕಾಗಿದ್ದ ಹಣದಲ್ಲಿ ಎರಡು ಎರಡೂವರೆ ಲಕ್ಷ ಡಾಲರ್‌ನಷ್ಟು ಹಣ ಕಡಿಮೆಯಾಗಿತ್ತು. ಆದರೆ ಜಮಾಅತಿನವರು ಬಹಳ ತ್ಯಾಗ ಸಹಿಸಿ ಈ ಹಣವನ್ನು ಪಾವತಿಸಿದರು. ಮೊದಲೇ ಚಂದ ನೀಡಿದವರು ಸಹ ಪುನಃ ಚಂದ ನೀಡಿದರು. ಕೆಲವರು ತಮಗೆ ಸಾಧ್ಯವಿರುವಷ್ಟು ನೀಡಿದರು. ಈ ರೀತಿ ಅಂದಾಜು ಏಳು ಲಕ್ಷ ಡಾಲರ್ ಹಣ ಅಲ್ಲಿನ ಜಮಾಅತ್ ಜಮಾಯಿಸಿತು. ಒಬ್ಬ ವಿದ್ಯಾರ್ಥಿ ಪಾರ್ಟ್‌ಟೈಮ್ ಕೆಲಸ ಮಾಡುತ್ತಿದ್ದರು. ಅವರಿಗೆ ಎಂಬತ್ತು ಸಾವಿರ ಯೆನ್ ಸಂಬಳ ದೊರಕುತ್ತಿತ್ತು. ಅದರಿಂದ ಐವತ್ತು ಸಾವಿರ ಯೆನ್ ಮಸ್‌ಜಿದ್ ನಿರ್ಮಾಣಕ್ಕೆ ನೀಡುತ್ತಿದ್ದಾರೆ. ಅಥವಾ ಈ ವರದಿ ತಯಾರಿಸುವ ತನಕ ನೀಡುತ್ತಿದ್ದರು. ಅಹ್ಮದಿ ಮಕ್ಕಳು ಸಹ ಬಹಳ ತ್ಯಾಗ ಮಾಡುವವರಾಗಿದ್ದಾರೆ. ಅವರು ತಮ್ಮ ಪಾಕೆಟ್‌ಮನಿ ಮಸ್‌ಜಿದ್ ನಿರ್ಮಾಣಕ್ಕೆ ನೀಡುತ್ತಿದ್ದರು. ಮಕ್ಕಳ ಪೈಕಿ ಎಲ್ಲರಿಗಿಂತ ಹೆಚ್ಚಾಗಿ ಒಬ್ಬ ಬಾಲಿಕೆ ತ್ಯಾಗ ಮಾಡಿದಳು. ಅವಳು ವಿವಿಧ ದೇಶಗಳ ಕರೆನ್ಸಿ ನೋಟುಗಳನ್ನು ಜಮಾಯಿಸುತ್ತಿದ್ದಳು. ಅವಳಿಗೆ ಹಿರಿಯರಿಂದ ಪಾರಿತೋಷಿಕವಾಗಿ ಲಭಿಸಿದ ಹಣವನ್ನು ಜಮಾಯಿಸಿದ್ದಳು. ಅವುಗಳನ್ನು ಎಣಿಸಿದಾಗ ಅಂದಾಜು ಒಂಬತ್ತು ಸಾವಿರ ಡಾಲರ್‌ನಷ್ಟಿತ್ತು. ಅದನ್ನು ಆ ಬಾಲಿಕೆ ಮಸ್‌ಜಿದ್ ನಿರ್ಮಾಣಕ್ಕಾಗಿ ಕೊಟ್ಟಳು. ಅಹ್ಮದಿ ಮಹಿಳೆಯರೂ ಸಹ ಬಹಳ ತ್ಯಾಗ ಮಾಡಿದ್ದಾರೆ. ಅವರು ತಮ್ಮ ಆಭರಣ ಜಮಾಅತಿಗೆ ನೀಡಿದರು. ಒಬ್ಬ ಮಹಿಳೆ ತನ್ನ ಇಪ್ಪತ್ತನಾಲ್ಕು ಬಳೆಗಳನ್ನು ಮಸ್‌ಜಿದ್‌ಗೆ ಚಂದವಾಗಿ ನೀಡಿದರು. ಇನ್ನೊಬ್ಬ ಮಹಿಳೆ ತನ್ನ ತಾಯಿಯಿಂದ ಲಭಿಸಿದ ಎಲ್ಲ ಆಭರಣಗಳನ್ನು ನೀಡಿದರು. ಒಬ್ಬ ಮಹಿಳೆ ಪಾಕಿಸ್ತಾನದಿಂದ ಬಂದಿದ್ದರು. ಅವರು ತನ್ನ ಮಗಳ ವಿವಾಹದ ಸಂದರ್ಭದಲ್ಲಿ ಜನವರಿಯಲ್ಲಿ ಖರೀದಿಸಿದ ಹೊಸ ಆಭರಣಗಳನ್ನು ಮಸ್‌ಜಿದ್‌ಗೋಸ್ಕರ ನೀಡಿದರು. ಈ ಎಲ್ಲ ತ್ಯಾಗ ಮಾಡುವವರಿಗೆ ಅಲ್ಲಾಹನು ಅಪರಿಮಿತವಾಗಿ ಅನುಗ್ರಹ ನೀಡಲಿ. ಅವರ ಸಂಪತ್ತು ವರ್ಧಿಸಲಿ. ಅವರ ಸಂತಾನ ವರ್ಧಿಸಲಿ. ಅವರ ವಿಶ್ವಾಸ ದೃಢವಾಗುತ್ತಾ ಹೋಗಲಿ. ಅವರೆಲ್ಲರೂ ಮಸ್‌ಜಿದ್‌ಗೆ ಸಂಬಂಧಿಸಿದ ತಮ್ಮ ಕರ್ತವ್ಯಗಳನ್ನು ಈಡೇರಿಸುವವರಾಗಲಿ. ಈ ಮಸ್‌ಜಿದ್ ಅವರ ಆರಾಧನೆಯ ಮಟ್ಟವನ್ನು ವರ್ಧಿಸುವಂತೆ ಮಾಡಲಿ. ಪರಸ್ಪರ ಪ್ರೀತಿ ವಿಶ್ವಾಸಗಳನ್ನು ವರ್ಧಿಸುವಂತೆ ಮಾಡಲಿ. ಈ ಪ್ರೀತಿ ವಿಶ್ವಾಸಗಳನ್ನು ನೋಡಿ ಅನ್ಯರು ಸಹ ಈ ಕಡೆಗೆ ಗಮನ ಹರಿಸುವವರಾಗಲಿ.

ನಮ್ಮ ಜಮಾಅತಿನವರಲ್ಲದ ನೆರೆಹೊರೆಯವರು ಸಹ ಬಹಳ ಪ್ರೀತಿ ವಿಶ್ವಾಸಗಳನ್ನು ಪ್ರಕಟಿಸಿದರು. ಒಬ್ಬ ಜಪಾನಿ ಸ್ನೇಹಿತ ತನ್ನ ಮೂರು ಅಂತಸ್ತಿನ ಮನೆಯನ್ನು ಅತಿಥಿಗಳ ವಾಸಕ್ಕೋಸ್ಕರ ಬಿಟ್ಟುಕೊಟ್ಟರು. ಇಲ್ಲಿಗೆ ಅನೇಕ ಅತಿಥಿಗಳು ವಾಹನದಲ್ಲಿ ಬರಲಿದ್ದಾರೆಂದು ತಿಳಿದುಕೊಂಡ ನೆರೆಹೊರೆಯವರು ವಾಹನಗಳನ್ನು ಪಾರ್ಕ್ ಮಾಡಲು ತಮ್ಮ ಸ್ಥಳಗಳನ್ನು ಕೊಟ್ಟರು. ಜಪಾನಿ ಜನರು ಕಟ್ಟಡಗಳನ್ನು ಉದ್ಘಾಟಿಸುವಾಗ ಅದನ್ನು ಹೂವಿನಿಂದ ಅಲಂಕರಿಸುತ್ತಾರೆ. ಇಬ್ಬರು ಜಪಾನಿ ಮಿತ್ರರಿಗೆ ಮಸ್‌ಜಿದ್ ಉದ್ಘಾಟನೆ ಬಗ್ಗೆ ತಿಳಿದಾಗ ಅವರು ಮಸ್‌ಜಿದನ್ನು ಹೂಗಳಿಂದ ಅಲಂಕರಿಸಲು ಬಯಸುವುದಾಗಿ ತಿಳಿಸಿದರು. ಅವರು ಹೂಗಳಿಂದ ಅಲಂಕರಿಸಲು ಪೂರ್ಣ ಸಹಕಾರ ನೀಡಿದರು. ಮಸ್‌ಜಿದನ್ನು ಸರಕಾರದಲ್ಲಿ ರಿಜಿಸ್ಟರ್ ಮಾಡುವ ಕೆಲಸವನ್ನು ಒಬ್ಬ ಮುಸ್ಲಿಮೇತರ ವಕೀಲರು ನಿರ್ವಹಿಸಿದರು. ಅಕ್ಯುಂಜಿಮಾ ಸಾಹಿಬ್ ಎಂಬ ಅವರು ಬಹಳ ನಿಸ್ವಾರ್ಥ ಸೇವೆ ಸಲ್ಲಿಸಿದರು. ಅವರ ಫೀಸು ಅಂದಾಜು ಇಪ್ಪತ್ತು ಸಾವಿರ ಡಾಲರ್ ಆಗುತ್ತಿತ್ತು. ಅವರು ಹೇಳಿದರು ಅಹ್ಮದಿಯಾ ಜಮಾಅತ್ ಜಪಾನಿಗೆ ಉಪಕಾರ ಮಾಡಿದೆ. ಅದಕ್ಕೆ ಬದಲಾಗಿ ನಾನು ನಿಮ್ಮ ಕೆಲಸ ಮುಫತ್ತಾಗಿ ಮಾಡುತ್ತೇನೆ. ಅವರು ಯಾವುದೇ ಫೀಸ್ ಪಡೆಯದೆ ಕೆಲಸ ಮಾಡಿಕೊಟ್ಟರು.

ನಾನು ಪ್ರಾರಂಭದಲ್ಲಿ ಹೇಳಿದ ಹಾಗೆ ಎಲ್ಲ ದೊಡ್ಡ ಪತ್ರಿಕೆಗಳು ಮತ್ತು ಪ್ರಸಿದ್ಧ ಟಿ.ವಿ. ಚ್ಯಾನಲ್‌ಗಳ ಮೂಲಕ ನಮ್ಮ ಮಸ್‌ಜಿದ್‌ನ ಪರಿಚಯ ಮಾಡಿಕೊಡಲಾಗಿದೆ. ಅಹ್ಮದಿಯಾ ಜಮಾಅತ್ ಶಾಂತಿ ಸಮಾಧಾನಗಳನ್ನು ಹರಡುವ ಇಸ್ಲಾಮ್ ಧರ್ಮದ ಪ್ರತಿನಿಧಿಯೆಂದು ಅನ್ಯರಿಗೆ ತಿಳಿದಿದೆ. ಅದು ಸಮಾಜ ಸೇವೆ ಮಾಡುತ್ತದೆ ಎಂದು ಸಹ ಅವರಿಗೆ ತಿಳಿದಿದೆ. ಈ ಅಭಿಪ್ರಾಯವನ್ನು ಸ್ಥಿರವಾಗಿಡುವಂತೆ ಮಾಡಲು ಮತ್ತು ಅದರ ಪ್ರಭಾವ ವರ್ಧಿಸಲು ಇಲ್ಲಿರುವ ಪ್ರತಿಯೊಬ್ಬ ಅಹ್ಮದಿ ಪ್ರಯತ್ನ ಮಾಡಬೇಕಾಗಿದೆ. ಅಲ್ಲಾಹನು ಎಲ್ಲರಿಗೂ ಹೀಗೆ ಮಾಡಲು ಭಾಗ್ಯ ನೀಡಲಿ. ಇಸ್ಲಾಮ್ ಶಾಂತಿ ಮತ್ತು ಪ್ರೀತಿ ಹರಡುವ ಧರ್ಮವೆಂಬ ಸತ್ಯವನ್ನು ಹರಡುವ ಭಾಗ್ಯವನ್ನು ಪ್ರತಿಯೊಬ್ಬ ಅಹ್ಮದಿಗೆ ಅಲ್ಲಾಹನು ನೀಡಲಿ. ನಮ್ಮ ಮಸ್‌ಜಿದ್ ಈ ಸಂದೇಶದ ಲಾಂಛನವಾಗಲಿ. ಜಪಾನಿ ಜನಾಂಗದಲ್ಲಿ ಇಸ್ಲಾಮಿನ ವಾಸ್ತವಿಕ ಸಂದೇಶ ಹರಡುವ ಮಾರ್ಗಗಳು ವಿಶಾಲವಾಗುತ್ತಾ ಹೋಗಲಿ. ತಮ್ಮನ್ನು ಸೃಷ್ಟಿಸಿದವನನ್ನು ಗುರುತಿಸುವ ಭಾಗ್ಯ ಈ ಜನಾಂಗದವರೂ ಗಳಿಸುವಂತಾಗಲಿ. ಮಾನವರಿಗೆ ಅನುಗ್ರಹವಾಗಿರುವ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನವನ್ನು ಅವರು ಮನವರಿಕೆ ಮಾಡಿಕೊಳ್ಳುವವರಾಗಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Ahad, Japan on 20-11-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon